# ವಿಧವಾ ವೇತನ

| | | |
|---|---|---|
| 1 | ವಿಧವಾ ವೇತನ ಜಾರಿಗೆ ಬಂದ ದಿನ ಯಾವುದು? | ಈ ಯೋಜನೆಯು 1ನೇ ಏಪ್ರಿಲ್ 1984 ರಿಂದ ಜಾರಿಗೆ ಬಂದಿದೆ. |
| 2 | ಉದ್ದೇಶ | ಯಾವುದೇ ರೀತಿಯ ಜೀವನಾಧಾರವಿಲ್ಲದ ನಿರ್ಗತಿಕ ವಿಧವೆಯರಿಗೆ ಹಣಕಾಸು ನೆರವು ನೀಡುವ ಮೂಲಕ ಸಾಮಾಜಿಕ ಭದ್ರತೆಯನ್ನು ಒದಗಿಸುವದೇ ಈ ಯೋಜನೆಯ ಉದ್ದೇಶ. |
| 3 | ಮಶಾಸನ ಮಂಜೂರು ಮಾಡುವ ಅಧಿಕಾರ? | ಸರ್ಕಾರದ ಆದೇಶ ಸಂ.SWL/ 5 /SWP 84. ದಿನಾಂಕ:8ನೇ ಮಾರ್ಚ 1984 ರನ್ವಯ ತಹಶೀಲ್ದಾರರಿಗೆ ಹಾಗೂ ಸರಕಾರದ ಆದೇಶ ಕ್ರ.ಸಂ.ಎಸ್ ಡಬ್ಲ್ಯೂ ಎಲ್ 27/ಒಎಪಿ.86 ದಿನಾಂಕ:16.10.1986ರನ್ವಯ ನಾಡ ಪದ್ಧತಿ ಇರುವಲ್ಲಿ ತಹಶೀಲ್ದಾರರುಗಳಿಂದ ಉಪತಹಶೀಲ್ದಾರರಿಗೆ ವಿಧವಾ ವೇತನ ಮಂಜೂರ ಮಾಡುವ ಅಧಿಕಾರ ನೀಡಲಾಗಿದೆ. |
| 4 | ನಿರ್ಗತಿಕ ವಿಧವೆ ಅಂದರೆ ಯಾರು? ಹಾಗೂ ವೇತನ ಪಡೆಯಲು ಅರ್ಹತೆಗಳು ಯಾವುವು? | 1) ಪತಿಯು ಜೀವಿಸಿಲ್ಲದ ಅಥವಾ ಕಾನೂನು ರೀತ್ಯಾ ಮೃತಪಟ್ಟಿರುವನೆಂದು ಭಾವಿಸುವವನ ಪತ್ನಿ ಮತ್ತು ಅವಳ ಸಂಬಂಧಿಕರ ಆಶ್ರಯ ವಿಲ್ಲದ ಮತ್ತು 6000/- ರೂ ಗಳಿಗೆ ಮೀರದ ವಾರ್ಷಿಕ ಆದಾಯ ಹೊಂದಿಲ್ಲದಿರುವ ಒಬ್ಬ ಸ್ತ್ರೀ.<br>2) ಆಕೆಗೆ 18 ವರ್ಷಕ್ಕಿಂತ ಹೆಚ್ಚಾಗಿರಬೇಕು. |
| 5 | ವಿಧವಾ ಪ್ರಮಾಣ ಪತ್ರ ಯಾರು ನೀಡುವರು? | ಪತಿ ಮೃತಪಟ್ಟ ಬಗ್ಗೆ ಮರಣ ಉತಾರ ಲಭ್ಯವಿದಿದ್ದಲ್ಲಿ ತಹಶೀಲ್ದಾರರು ವಿಧವಾ ಪ್ರಮಾನ ಪತ್ರ ನೀಡಬಹುದಾಗಿದೆ. |
| 5 | ವಿಧವಾ ವೇತನಕ್ಕಾಗಿ ಅರ್ಜಿ ಸಲ್ಲಿಸುವ ವಿಧಾನವೇನು? | ಆಕೆಗೆ 18 ವರ್ಷಕ್ಕಿಂತ ಹೆಚ್ಚಾಗಿರಬೇಕು. ಅರ್ಜಿದಾರಳು ಅರ್ಜಿಯ ದಿನಾಂಕದಿಂದ ಹಿಂದಿನ ನಿರಂತರ 3 ವರ್ಷಗಳ ಅವಧಿಗೆ ಕಡಿಮೆ ಇಲ್ಲದಂತೆ ಕರ್ನಾಟಕ ರಾಜ್ಯದ ನಿವಾಸಿಯಾಗಿರತಕ್ಕದ್ದು. ವಿಧವಾ ವೇತನಕ್ಕಾಗಿ ಸಲ್ಲಿಸುವ ಅರ್ಜಿಯು ಗೊತ್ತುಪಡಿಸಿದ ನಮೂನೆಯಲ್ಲಿರಬೇಕು ಮತ್ತು ಅದನ್ನು ಸಂಬಂಧಪಟ್ಟ ತಹಶೀಲ್ದಾರರಿಗೆ ಸಲ್ಲಿಸಬೇಕು. |
| 6 | ಅರ್ಜಿಯನ್ನು ವಿಲೇವಾರಿಗೊಳಿಸಲು ನಿಗದಿಪಡಿಸಲಾದ ಕಾಲಮಿತಿ ಏನು? | ತಾಲೂಕ ಕಚೇರಿಯಲ್ಲಿ ಸ್ವೀಕರಿಸಿದ ದಿನಾಂಕ ದಿಂದ ಗರಿಷ್ಟ 2 ತಿಂಗಳ ಅವಧಿಯೊಳಗಾಗಿ ಅವುಗಳ ವಿಲೇವಾರಿಯಾಗಬೇಕು. |